


ಚಿತ್ರ: ಅನೂಪ್ ರಾಘ ಟಿ.

# ಶತಮಾನದ ಬೆಳಕಲ್ಲಿ ಮೈಸೂರು ಅರಮನೆ

ಕರುನಾಡ ಸಾಂಸ್ಕೃತಿಕ ನಗರಿ ಮೈಸೂರಿನ ಆಕರ್ಷಣೆ, ಸುಂದರ ಅರಮನೆ. ದೀಪಾಲಂಕಾರದ ನಡುವೆ ಝುಗಮಗಿಸುವ ಅರಮನೆ ವಿಶ್ವ ಪ್ರಸಿದ್ಧ ಕೂಡ. 1925ರಲ್ಲಿ ಆರಂಭವಾದ ವಿದ್ಯುತ್ ದೀಪಾಲಂಕಾರಕ್ಕೀಗ ನೂರರ ಸಂಭ್ರಮ. ಇದೇ ನೆಪದಲ್ಲಿ ಅರಮನೆ ಹಾಗೂ ದೀಪಾಲಂಕಾರದ ಮೇಲೊಂದು ಇಣುಕುನೋಟ.

■ ಎನ್. ಜಗನ್ನಾಥ್ ಪ್ರಕಾಶ್

ವಿಶ್ವ ಪ್ರಸಿದ್ಧ ಮೈಸೂರು ಅರಮನೆ ಕಟ್ಟಡಕ್ಕೆ ವಿದ್ಯುತ್ ದೀಪಾಲಂಕಾರ ಆರಂಭವಾಗಿ ಒಂದು ನೂರು ವರ್ಷ. ಇದೇ ನೆಪದಲ್ಲಿ ಮೈಸೂರು ಅರಮನೆ ಹಾಗೂ ಅರಮನೆಯನ್ನು ಬೆಳಗಿದ ವಿದ್ಯುತ್ ದೀಪಾಲಂಕಾರದ ಇತಿಹಾಸವನ್ನೊಮ್ಮೆ ಮೆಲುಕು ಹಾಕೋಣ.

ದೇಶದ ಪ್ರಮುಖ ಪ್ರವಾಸಿ ತಾಣವಾಗಿರುವ ಕನ್ನಡ ನಾಡಿನ ಸಾಂಸ್ಕೃತಿಕ ನಗರಿ ಮೈಸೂರಿನ ವಿಶೇಷ ಆಕರ್ಷಣೆಯೇ ಅರಮನೆ. ಈ ಅದ್ಭುತ ಅರಮನೆ ಹರಡಿರುವ ವಿಸ್ತೀರ್ಣ 72 ಎಕರೆ. ಬೆಂಕಿಗೆ ಆಹುತಿಯಾದ ಹಳೆಯ ಅರಮನೆಯ (1897) ಅಡಿಪಾಯದ ಮೇಲೆ ನಿರ್ಮಿಸಲಾಗಿರುವ ಅರಮನೆ ಇದು.

ಹೈದರಾಲಿ ಟಿಪ್ಪು ಸುಲ್ತಾನ್ ವಶ ಮಾಡಿಕೊಂಡಿದ್ದ ಮೈಸೂರು ಒಡೆಯರ್ ಆಡಳಿತವನ್ನು ಶ್ರೀರಂಗಪಟ್ಟಣ ಯುದ್ಧದಲ್ಲಿ ಟಿಪ್ಪು ಸುಲ್ತಾನರನ್ನು ಸೋಲಿಸಿದ ಮೇಲೆ ಬ್ರಿಟಿಷರು ಒಡೆಯರ್ ಮನೆತನದವರಿಗೆ ವಾಪಸ್ ನೀಡಲು ನಿರ್ಧರಿಸಿದ್ದರು. ಒಡೆಯರ್ ವಂಶಸ್ಥರ ವಾರಸುದಾರರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅಪ್ರಾಪ್ತ ವಯಸ್ಕರಾಗಿದ್ದರಿಂದ ಅವರ ತಾಯಿ ರಾಜಮಾತೆ ಕೆಂಪನಂಜಮ್ಮಣ್ಣಿ ಅವರೇ ಆಡಳಿತ ಸೂತ್ರ ಮುನ್ನಡೆಸುತ್ತಿದ್ದರು.

ಕೆಂಪನಂಜಮ್ಮಣ್ಣಿ ಅವರು ತಾವು ವಾಸಿಸುತ್ತಿದ್ದ ಅರಮನೆ ಅಗ್ನಿಗಾಹುತಿ ಆಗಿದ್ದಕ್ಕೆ ಧೃತಿಗೆಡಲಿಲ್ಲ. ತಡಮಾಡದೆ ಅರಮನೆ ಸ್ಥಳದಲ್ಲೇ ನೂತನ ಅರಮನೆ ನಿರ್ಮಿಸುವ ನಿರ್ಧಾರ ಕೈಗೊಂಡರು. ಅದೊಂದು ಭವ್ಯ ಕಟ್ಟಡವಾಗಿರಬೇಕೆಂಬುದು ಅವರ ಆಲೋಚನೆ. ಹಿಮಾಲಯದ ಶಿಮ್ಲಾದಲ್ಲಿ ಬ್ರಿಟಿಷರ ವೈಸ್‌ರಾಯ್ ಭವನವನ್ನು ನಕಾಶೆ ಮಾಡಿಕೊಟ್ಟಿದ್ದ ಹೆಸರಾಂತ ವಾಸ್ತುಶಿಲ್ಪಿ ಹೆನ್ರಿ ಇರ್ವಿನ್ ಅವರನ್ನೇ ಮೈಸೂರಿಗೆ ಆಹ್ವಾನಿಸಿದರು.